# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯವರ ಘನ ಅಧ್ಯಕ್ಷತೆಯಲ್ಲಿ ದಿ:18.06.2022 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಭೆಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

ವಾರ್ಡಿನ ಕೆಲಸ ಪರಿವೀಕ್ಷಕರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ.ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ.ಹೇಮಂತ್ ಕುಮಾರ್ ಸ.ಅ 134. | ಕಾರ್ಯದರ್ಶಿ. |
| 3. | ಶ್ರೀ.ಗೋಪಾಲ್ ಕೃಷ್ಣ (ಪೋಲಿಸ್ ಎಲ್.ಓ) | ಎ.ಎಸ್.ಐ |
| 4. | ಶ್ರೀ.ಅಣ್ಣಪ್ಪ | TI |
| 5. | ಶ್ರೀ.ಶ್ರೀನಿವಾಸ್ | ಸಾರ್ವಜನಿಕರು |
| 6. | ಶ್ರೀ.ವಹೀದ್ | ಸಾರ್ವಜನಿಕರು |
| 7. | ಶ್ರೀಮತಿ.ಅಜ್ರಾನ್ | ಸಾರ್ವಜನಿಕರು |
| 8. | ಶ್ರೀ.ನವಾಜ್ | ಸಾರ್ವಜನಿಕರು |
| 9. | ಶ್ರೀ.ಮಲ್ಲೇಶ್ | SWM |
| 10. | ಶ್ರೀ.ರವಿಕುಮಾರ್ | ಸಾರ್ವಜನಿಕರು |
| 11. | ಶ್ರೀ.ಶಿವರಾಜ್ | ಸಾರ್ವಜನಿಕರು |
| 12. | ಶ್ರೀಮತಿ.ಡಾ॥ವಿಜಯಕುಮಾರಿ | ವೈದ್ಯರು |

1. ಹೊಸಗುಡ್ಡದಹಳ್ಳಿಯ ಎಚ್ ರಸ್ತೆಯಲ್ಲಿ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, BWSSBಯ ಎರಡು Manhole ನಿರ್ಮಿಸಲಾಗುತ್ತಿದೆ. ಎರಡು Manholeಗಳ ಮಧ್ಯೆ ಒಡೆದಿದ್ದ ಪೈಪ್‌ಗಳನ್ನು ಸಹ ಬದಲಾಯಿಸಲಾಗಿರುತ್ತದೆ. ಅಗೆದ ಮಣ್ಣು ಮತ್ತು ಡೇಬ್ರಿಸ್‌ಗಳನ್ನು ತೆರವುಗೊಳಿಸಿ ರೋಡ್ ಕಟಿಂಗ್‌ಗಳನ್ನು ಮುಚ್ಚಲಾಗುವುದು.

2. ಬಾಪೂಜಿನಗರದ 5ನೇ ಮುಖ್ಯರಸ್ತೆ Manhole ಕಟ್ಟಿದ್ದು ಅದರ ಡೇಬ್ರಿಸ್‌ಗಳನ್ನು ತೆರವುಗೊಳಿಸಿದೆ ಹಾಗೂ ಪಾಟ್ ಹೋಲ್‌ಗಳನ್ನು ಮುಚ್ಚಲಾಗಿದೆ.

3. 6ನೇ ಕ್ರಾಸ್‌ನಲ್ಲಿ Mini Tankಗೆ ನೀರಿನ ಸರಬರಾಜು ಮಾಡಿಕೊಡಬೇಕೆಂದು ಸಾರ್ವಜನಿಕರು ಮನವಿ ಮಾಡಿದರು.

4. BWSSB ರಸ್ತೆಯಲ್ಲಿನ R.O.Plantನ್ನು ನವೀಕರಿಸಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರು ಮನವಿ ಮಾಡಿದರು.

5. ಘನತ್ಯಾಜ್ಯ ನಿರ್ವಹಣೇ ಸಮರ್ಪಕವಾಗಿ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಪ್ರತಿದಿನ ವಾರ್ಡ್‌ನಲ್ಲಿ ಕಸವಿಂಗಡನೆ-ಸಾಗಣೆ ಸಮರ್ಪಕವಾಗಿ ನಡೆಯುತ್ತಿರುವುದಾಗಿ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

6. ಈ ಪಾಕ್ಷಿಕದಲ್ಲಿ ರೂ: 63 ಲಕ್ಷಗಳು ತೆರಿಗೆ ಮೂಲಕ ಸಂಗ್ರಹಿಸಲಾಗಿದೆ ಎಂದು ತೆರಿಗೆ ಪರಿವೀಕ್ಷಕರು ಸಭೆಗೆ ತಿಳಿಸಿದರು.

7. ಮಂಜುನಾಥನಗರದ ನಂಜುಂಡೇಶ್ವರ ದೇವಾಲಯದ ಬಳಿ ಮೂರು ಬೀದಿ ದೀಪಗಳು ಹಾಗೂ ಬಾಪೂಜಿನಗರ 17ನೇ ಕ್ರಾಸ್ ಟಿ.ಸಿ ಬಳಿ ಬಲ್ಬುಗಳು Burn ಆಗಿದ್ದು ಬದಲಾಯಿಸಿಕೊಡಬೇಕಂದು ವಿನಂತಿಸಿ Street Light Repair Agencyಗೆ ದೂರವಾಣಿ ಮುಖೇನ ತಿಳಿಸಿ ಸಮಸ್ಯೆ ಬಗೆಹರಿಸಲಾಗಿದೆ.

8. Global School ಬಳಿ ಒಂದು ಮಾರುತಿ ಅಮಿನಿ ಸಂಖ್ಯೆ: ಕೆ.ಎ.01.ಎಂ.ಡಿ.8125 ನಿಂತಿದ್ದು ಅದನ್ನು ತೆರವುಗೊಳಿಸಲು ಮನವಿ ಮಾಡಿ ಈದಿನ ಸಂಚಾರ ಪೋಲಿಸ್‌ನವರು ಸಭೆಗೆ ಬಂದಿರದ ಕಾರಣ ದೂರವಾಣಿ ಮುಖಾಂತರ ತಿಳಿಸಿ ಸಮಸ್ಯೆ ಪರಿಶಿಲಿಸಿ/ಬಗೆಹರಿಸಲು ಅದ್ಯಕ್ಷರು ಸೂಚಿಸಿದರು.

9. ಎಂ.ಎಂ ಬೇಕರಿ ಬಳಿ ಅಟೋಗಳನ್ನು ಅಡ್ಡಾದಿಡ್ಡಿ ನಿಲ್ಲಿಸಿ ಶಾಲಾ ಮಕ್ಕಳು ಓಡಾಡಲು ತೊಂದರೆಯಾಗುತ್ತಿದ್ದು/ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುವುದನ್ನು ತಪ್ಪಿಸಲು ಸಾರ್ವಜನಿಕರು ಮನವಿ ಮಾಡಿದರು. ಈ ಸಮಸ್ಯೆಯನ್ನು ಸಂಚಾರ ಪೋಲಿಸ್‌ನವರು ಸಭೆಗೆ ಬಂದಿರದ ಕಾರಣ ದೂರವಾಣಿ ಮುಖಾಂತರ ತಿಳಿಸಿ ಸಮಸ್ಯೆ ಪರಿಶಿಲಿಸಿ/ಬಗೆಹರಿಸಲು ಅದ್ಯಕ್ಷರು ಸೂಚಿಸಿದರು.

10. ಎಲ್ಲಮ್ಮ ದೇವಾಲಯದ ಪಕ್ಕದ ರಸ್ತೆಯಲ್ಲಿ Water Contamination ಆಗಿದ್ದು ಕಲುಷಿತವಾಗುತ್ತಿದ್ದ ಪೈಪ್‌ನಭಾಗವನ್ನು ಬದಲಾಯಿಸಿ ಕೊಡಬೇಕೆಂದು ಶ್ರೀಮತಿ.ಅಜ್ರಾನ್ ರವರು ವಿನಂತಿಸಿ ಎ.ಇ BWSSB ದಿನೇಶ್ ರವರಿಗೆ ದೂರವಾಣಿ ಮುಖಾಂತರ ತಿಳಿಸಿ ಪರಿಶೀಲಿಸಿ ಸರಿಪಡಿಕೊಡುವುದಾಗಿ ಸಭೆಗೆ ತಿಳಿಸಿದರು.

11. ಈ ವಾರ್ಡ್ ನಲ್ಲಿ ಯಾವುದೇ ಕೊರೊನಾ ಕೇಸ್‌ಗಳು ಸದ್ಯದಲ್ಲಿ ಪತ್ತೆಯಾಗಿರುವುದಿಲ್ಲ. ನಾಯಿ ಕಚ್ಚಿದವರ ಮೂರು ಕೇಸ್‌ಗಳು ದಾಖಲಾಗಿದ್ದು ವಿಜಯನಗರ ಪಿ.ಎಚ್.ಸಿ.ಗೆ ಕಳುಹಿಸಿ ಚುಚ್ಚುಮದ್ದಿಗೆ ವ್ಯವಸ್ಥೆಮಾಡಲಾಗಿದೆಂದು ಡಾ॥ ಶ್ರೀಮತಿ.ವಿಜಯಕುಮಾರಿ ರವರು ಸಭೆಗೆ ತಿಳಿಸಿದರು.

12. ಒಂಟಿ ಮನೆ ಯೋಜನೆಯಡಿ ಈ ಕೆಳಕಂಡವರು ಅರ್ಜಿ ಸಲ್ಲಿಸಿ ಮನವಿ ಮಾಡಿ ನಮೂದಿಸಿರುವ ವಿಳಾಸದಲ್ಲಿ ನಿವೇಶನವನ್ನು ಪರಿಶೀಲಿಸಿ ಈ ವಾರ್ಡ್ ಸಮಿತಿ ಸಭೆಯಲ್ಲಿ ಅನುದಾನ ನೀಡಲು ಅಯ್ಕೆ ಮಾಡಿ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

- ಶ್ರೀಮತಿ. ಕಾವ್ಯ ವಿ ತಿಲಕ್ & ವಿಜಯ ಕುಮಾರ್‌ಎನ್. ನಂ.75/ಬಿ-1, 5ನೇ ಮುಖ್ಯರಸ್ತೆ, KHB ಬಾಪೂಜಿನಗರ, ಮೈಸೂರು ರಸ್ತೆ ಬೆಂಗಳೂರು ವಾರ್ಡ್ ನಂ.134.
- ಶ್ರೀಮತಿ. ನಟರಾಜು.ಎನ್ & ಪುನೀತ್ ಕುಮಾರ್.ಎನ್ ನಂ.75/ಬಿ-2, 5ನೇ ಮುಖ್ಯರಸ್ತೆ, KHB ಬಾಪೂಜಿನಗರ, ಮೈಸೂರು ರಸ್ತೆ ಬೆಂಗಳೂರು ವಾರ್ಡ್ ನಂ.134.

➢ ಈ ಸಭೆಯಲ್ಲಿ ಚರ್ಚಿಸಿರುವ ಸಮಸ್ಯೆಗಳನ್ನು ಬಗೆಹರಿಸಿ ಪಾಲನಾ-ವರದಿ ಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ಯವರು ತಿಳಿಸಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ.ಎಸ್.ಕೆ.ಹೇಮಂತ್ ಕುಮಾರ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ-ವಾರ್ಡ್ 134 ಹಾಗೂ
ಸಹಾಯಕ ಅಭಿಯಂತರರು,

(ನಿಶಾಂತ್)
ನೋಡಲ್ ಅಧಿಕಾರಿ ವಾರ್ಡ್-134